**ಕರ್ನಾಟಕ ಸರ್ಕಾರ**

(ಸಹಕಾರ ಇಲಾಖೆ)

**ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, 3ನೇ ವಲಯ, ಬೆಂಗಳೂರು ನಗರ ಜಿಲ್ಲೆ, ಸಹಕಾರ ಸೌಧ, 2 ನೇ ಮಹಡಿ, ಮಾರ್ಗೋಸಾ ರಸ್ತೆ, 8 ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003.**

ಕ್ರ.ಸಂ: ಎಆರ್‌ಬಿ–50 /ನೋಂದಣಿ /07 /54949 /2022–23. ದಿನಾಂಕ: 28–07–2022.

## ನೋಂದಣಿ ಪ್ರಮಾಣ ಪತ್ರ

ಗಂಗಾಧರ.ಬಿ.ವಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, 3ನೇ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಆದ ನಾನು **ಕ್ಲಾಸಿಕ್ ಲ್ಯಾಂಡ್‌ಮಾರ್ಕ್ ಅಪಾರ್ಟ್‌ಮೆಂಟ್ ಒನರ್ಸ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್, ಸರ್ವೆ ನಂ.34/9– 34/13, ಜುನ್ನಸಂದ್ರ, ಆಫ್ ಸರ್ಜಾಪುರ ರಸ್ತೆ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–560035** ಈ ಸಹಕಾರ ಸಂಘವನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 7ರನ್ವಯ ನೋಂದಣಿ ಮಾಡಿ, ಕಲಂ 8 ರನ್ವಯ ನೋಂದಣಿ ಪ್ರಮಾಣ ಪತ್ರವನ್ನು ನನ್ನ ಸ್ವಹಸ್ತಾಕ್ಷರ ಮತ್ತು ಕಛೇರಿ ಮುದ್ರೆಯೊಂದಿಗೆ ನೀಡಿರುತ್ತೇನೆ.

Gangadhar.B.V

(ಬಿ.ವಿ.ಗಂಗಾಧರ)

ಸಹಕಾರ ಸಂಘಗಳ ಸಹಾಯಕ ನಿಬಂಧಕರು,

ಮೂರನೇ ವಲಯ, ಬೆಂಗಳೂರು ನಗರ ಜಿಲ್ಲೆ.

ಸಹಕಾರ ಸಂಘಗಳ ಸಹಾಯಕ ನಿಬಂಧಕರು

ಮೂರನೇ ವಲಯ, ಬೆಂಗಳೂರು ನಗರ ಜಿಲ್ಲೆ.

**ಕರ್ನಾಟಕ ಸರ್ಕಾರ**

**(ಸಹಕಾರ ಇಲಾಖೆ)**

**ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, 3ನೇ ವಲಯ, ಬೆಂಗಳೂರು ನಗರ ಜಿಲ್ಲೆ, ಸಹಕಾರ ಸೌಧ, 2 ನೇ ಮಹಡಿ, ಮಾರ್ಗೋಸಾ ರಸ್ತೆ, 8 ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003.**

ಕ್ರ.ಸಂ: ಎಆರ್‌ಬಿ-50/ನೋಂದಣಿ/06/54949/2022-23. ದಿನಾಂಕ: 28-07-2022.

ವಿಷಯ:- ಕ್ಲಾಸಿಕ್ ಲ್ಯಾಂಡ್‌ಮಾರ್ಕ್ ಅಪಾರ್ಟ್‌ಮೆಂಟ್ ಒನರ್ಸ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ಸರ್ವೆ ನಂ.34/9- 34/13, ಜುನ್ನಸಂದ್ರ, ಆಫ್ ಸರ್ಜಾಪುರ ರಸ್ತೆ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-560035 ಈ ಸಹಕಾರ ಸಂಘದ ನೋಂದಣಿ ಕುರಿತು.

ಉಲ್ಲೇಖ :- 1. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ ಬೆಂಗಳೂರು,ಇವರ ಸುತ್ತೋಲೆ: ಸಂಖ್ಯೆ: ಆರ್‌ಎಸ್‌ಆರ್/ 127/ ಎಕ್ಸ್‌ಎಂಸಿ/ 2007-08 ದಿನಾಂಕ: 26.02.2008.

2. ಸಹಕಾರ ಸಂಘಗಳ ಅಪರ ನಿಬಂಧಕರು(ವಸತಿ ಮತ್ತು ಇತರೆ), ಸಹಕಾರ ಸಂಘಗಳ ನಿಬಂಧಕರ ಕಚೇರಿ, ಕರ್ನಾಟಕ ರಾಜ್ಯ ಬೆಂಗಳೂರು, ಇವರ ಪತ್ರ ಸಂಖ್ಯೆ: ಒಟಿಎಸ್-2/158/ಪಿಎಲ್‌ಎನ್/2021-22, ದಿನಾಂಕ:14-02-2022.

3. ಈ ಕಛೇರಿಯ ಪತ್ರ ಕ್ರಮ ಸಂಖ್ಯೆ: ಕ್ರ.ಸಂ: ಎಆರ್‌ಬಿ-50:ನೋಂದಣಿ/ ಷೇರು-ಅ/ 25/ 2021-22, ದಿನಾಂಕ: 02.12.2021.

4. ಮುಖ್ಯ ಪ್ರವರ್ತಕರ ಪ್ರಸ್ತಾವನೆ ದಿನಾಂಕ: 03.01.2022 ಮತ್ತು 22.07.2022.

****

**ಪ್ರಸ್ತಾವನೆ :-**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕ್ಲಾಸಿಕ್ ಲ್ಯಾಂಡ್‌ಮಾರ್ಕ್ ಅಪಾರ್ಟ್‌ಮೆಂಟ್ ಒನರ್ಸ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ಸರ್ವೆ ನಂ.34/9, 34/13, ಜುನ್ನಸಂದ್ರ, ಆಫ್ ಸರ್ಜಾಪುರ ರಸ್ತೆ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-560035 ಇದರ ನೋಂದಣಿ ಪೂರ್ವದಲ್ಲಿ ಮುಖ್ಯ ಪ್ರವರ್ತಕರಾದ ಶ್ರೀ.ಜಿಬಿನ್ ಜಯರಾಮ್ ಇವರಿಗೆ ಕನಿಷ್ಠ 200 ಅಪಾರ್ಟ್‌ಮೆಂಟ್ ಓನರ್ಸ್‌ಗಳಿಂದ ಕನಿಷ್ಠ 4.00 ಲಕ್ಷ (ನಾಲ್ಕು ಲಕ್ಷ ರೂಪಾಯಿ)ಗಳ ಷೇರುಹಣ ಸಂಗ್ರಹಣೆಗೆ ಉಲ್ಲೇಖ(3)ರಲ್ಲಿ ಅನುಮತಿ ನೀಡಿ ಆದೇಶಿಸಲಾಗಿತ್ತು.

ಉದ್ದೇಶಿತ ಸಹಕಾರ ಸಂಘದ ಹೆಸರಿನಲ್ಲಿ 200 ಅರ್ಹ ಸದಸ್ಯರಿಂದ ಷೇರುಧನ ಒಟ್ಟು ರೂ.4,00,000/ಗಳ (ನಾಲ್ಕು ಲಕ್ಷ ರೂಪಾಯಿಗಳು) ಮಾತ್ರ ಷೇರು ಹಣವನ್ನು ಸಂಗ್ರಹಿಸಿ ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಕೇಂದ್ರ ಬ್ಯಾಂಕ್ ನಿ. ಕೇಂದ್ರ ಕಛೇರಿ, ಚಾಮರಾಜಪೇಟೆ, ಬೆಂಗಳೂರು, ಇಲ್ಲಿ ಅಮಾನತ್ ಖಾತೆಯಲ್ಲಿ ಠೇವಣಿಸಿರುವ ಬಗ್ಗೆ ಬ್ಯಾಂಕಿನ ಶಾಖಾ ವ್ಯವಸ್ಥಾಪಕರಿಂದ ದೃಢೀಕರಣ ಸಲ್ಲಿಸಿರುತ್ತಾರೆ ಹಾಗೂ ಸರ್ಕಾರಕ್ಕೆ ನೋಂದಣಿ ಶುಲ್ಕ ರೂ.500/-ಗಳನ್ನು ದಿನಾಂಕ:22-07-2022ರಂದು ಚಲನ್ ಸಂಖ್ಯೆ: 197979279 ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಪಾವತಿಸಿ, ಮೂಲ ಚಲನ್‌ನೊಂದಿಗೆ ಸಂಘದ ನೋಂದಣಿಗಾಗಿ ಉಲ್ಲೇಖ(4)ರನ್ವಯ ನೋಂದಣಿ ಪ್ರಸ್ತಾವೆಯನ್ನು ಸಲ್ಲಿಸಿ ನೋಂದಣಿ ಮಾಡಿಕೊಡುವಂತೆ ಕೋರಿರುತ್ತಾರೆ.

ಪ್ರಸ್ತಾವೆಯು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂಗಳಿಗನುಗುಣವಾಗಿ ಇರುವುದರಿಂದ ಕ್ಲಾಸಿಕ್ ಲ್ಯಾಂಡ್‌ಮಾರ್ಕ್ ಅಪಾರ್ಟ್‌ಮೆಂಟ್ ಒನರ್ಸ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ಸರ್ವೆ ನಂ.34/9, 34/13, ಜುನ್ನಸಂದ್ರ, ಆಫ್ ಸರ್ಜಾಪುರ ರಸ್ತೆ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-560035 ಈ ಸಂಘದ ರಚನೆಯಿಂದ ಸಹಕಾರ ಸಂಘದ ವ್ಯಾಪ್ತಿಯಲ್ಲಿನ ಸದಸ್ಯರುಗಳಿಗೆ ಅನುಕೂಲವಾಗುವುದನ್ನು ಪರಿಗಣಿಸಿ ಉದ್ದೇಶಿತ ಈ ಸಹಕಾರ ಸಂಘವನ್ನು ನೋಂದಣಿ ಮಾಡಲು ಈ ಕೆಳಕಂಡಂತೆ ಆದೇಶಿಸಿದೆ.

**-:ಆದೇಶ:-**

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959 ರ ಕಲಂ 7 ರನ್ವಯ ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ. ಸಿಃ: 71 :ಸಿಎಲ್‌ಎಂ: 2016, ದಿನಾಂಕ:06-12-2016 ರಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಹೆಚ್.ಪಿ.ಸದಾಶಿವ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೂರನೇ ವಲಯ, ಬೆಂಗಳೂರು ನಗರ ಜಿಲ್ಲೆ, ಆದ ನಾನು ಕ್ಲಾಸಿಕ್ ಲ್ಯಾಂಡ್‌ಮಾರ್ಕ್ ಅಪಾರ್ಟ್‌ಮೆಂಟ್ ಒನರ್ಸ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ಸರ್ವೆ ನಂ.34/9, 34/13, ಜುನ್ನಸಂದ್ರ, ಆಫ್ ಸರ್ಜಾಪುರ ರಸ್ತೆ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-560035 ಈ ಸಂಘವನ್ನು ನೋಂದಣಿ ಮಾಡಿ ಆದೇಶಿಸಿರುತ್ತೇನೆ ಹಾಗೂ ಇದರ ಕಂಡಿಕೆಗಳ ಕ್ರಮಸಂಖ್ಯೆ 01 ರಿಂದ 81 ರವರೆಗಿನ ಮತ್ತು ಪುಟ ಸಂಖ್ಯೆ 01 ರಿಂದ 39 ರವರೆಗಿನ ಉಪವಿಧಿಗಳನ್ನು ಅನುಮೋದಿಸಿದೆ ಮತ್ತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 8ರನ್ವಯ ನೋಂದಣಿ ಪ್ರಮಾಣಪತ್ರವನ್ನು ನೀಡಿರುತ್ತೇನೆ.

ಮುಖ್ಯಪ್ರವರ್ತಕರು ಸಂಘದ ಪ್ರಥಮ ಸಾಮಾನ್ಯ ಮಹಾಸಭೆಯನ್ನು ಈ ಆದೇಶ ದಿನಾಂಕದಿಂದ 30 ದಿವಸಗಳೊಳಗಾಗಿ ಜರುಗಿಸತಕ್ಕದ್ದು, ಹಾಗೂ ಅನುಮೋದಿತ ಉಪವಿಧಿಗಳನ್ನು ಅಳವಡಿಸಿಕೊಳ್ಳತಕ್ಕದ್ದು ಹಾಗೂ ಸಭೆಯ ನಡುವಳಿಕೆಗಳನ್ನು ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ. ನೂತನ ಆಡಳಿತ ಮಂಡಲಿ ಸದಸ್ಯರ ಆಯ್ಕೆಗಾಗಿ ಚುನಾವಣೆ ನಡೆಸಲು ಸಕ್ಷಮ ಪ್ರಾಧಿಕಾರದ ಮೂಲಕ ನಿಯಮಾನುಸಾರ ವ್ಯವಸ್ಥೆ ಮಾಡುವುದು ಹಾಗೂ ಈ ಕಛೇರಿಗೆ ವರದಿ ಮಾಡುವುದು.

ಈ ಆದೇಶವನ್ನು ನನ್ನ ಸ್ವಹಸ್ತಾಕ್ಷರ ಹಾಗೂ ಕಛೇರಿಯ ಮೊಹರಿನೊಂದಿಗೆದಿನಾಂಕ: 28-07-2022ರಂದು ಈ ದಿನ ಜಾರಿ ಮಾಡಿದ್ದೇನೆ.

OFFICE OF THE ASSISTANT REGISTRAR OF CO-OPERATIVE SOCIETIES BANGALORE THIRD ZONE BANGALORE

ಸಹಿ/-
( ಗಂಗಾಧರ.ಬಿ.ವಿ )
ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ಮೂರನೇ ವಲಯ, ಬೆಂಗಳೂರು ನಗರ ಜಿಲ್ಲೆ.

**ಇವರಿಗೆ,**

ಶ್ರೀ. ಜಿಬಿನ್ ಜಯರಾಮ್,
ಮುಖ್ಯ ಪ್ರವರ್ತಕರು,
ಕ್ಲಾಸಿಕ್ ಲ್ಯಾಂಡ್‌ಮಾರ್ಕ್ ಅಪಾರ್ಟ್‌ಮೆಂಟ್
ಒನರ್ಸ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್,
ಸರ್ವೆ ನಂ.34/9- 34/13, ಜುನ್ನಸಂದ್ರ, ಆಫ್ ಸರ್ಜಾಪುರ ರಸ್ತೆ,
ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು,
ಬೆಂಗಳೂರು ನಗರ ಜಿಲ್ಲೆ-560035

**ಈ ಆದೇಶದ ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ. :**

1. ಗೌರವಪೂರ್ವಕವಾಗಿ ಸಹಕಾರ ಸಂಘಗಳ ಉಪನಿಬಂಧಕರು, ಮೂರನೇ ವಲಯ, ಬೆಂಗಳೂರು ನಗರ ಜಿಲ್ಲೆ, ಚುನಾವಣಾಧಿಕಾರಿ ನೇಮಕ ಮಾಡುವ ಸಲುವಾಗಿ ಉಪವಿಧಿಯ ಪ್ರತಿಯೊಂದಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
2. ಶಾಖಾ ವ್ಯವಸ್ಥಾಪಕರು, ಬೆಂಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ. ಕೇಂದ್ರ ಕಛೇರಿ ಶಾಖೆ, ಚಾಮರಾಜಪೇಟೆ, ಬೆಂಗಳೂರು ನಗರ ಜಿಲ್ಲೆ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

Gangadhar. BV
ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ಮೂರನೇ ವಲಯ, ಬೆಂಗಳೂರು ನಗರ ಜಿಲ್ಲೆ.
ಸಹಕಾರ ಸಂಘಗಳ ಸಹಾಯಕ ನಿಬಂಧಕರು
ಮೂರನೇ ವಲಯ, ಬೆಂಗಳೂರು ನಗರ ಜಿಲ್ಲೆ.